



## ಕನ್ನಡಮಯವಾಗಲಿ!

ಕಲರ್ಸ್ ಕನ್ನಡದಲ್ಲಿ 'ಬಿಗ್ ಬಾಸ್' ಹನ್ನೊಂದನೆಯ ಸೀಸನ್ ಪ್ರಾರಂಭವಾಗಿದೆ. ಈ ರಿಯಾಲಿಟಿ ಶೋನ ಬಗ್ಗೆ ಪರ ವಿರೋಧ ಟೀಕೆಗಳಿವೆ. ಆದರೆ ಕನ್ನಡದ ದೃಶ್ಯ ಮಾಧ್ಯಮದಲ್ಲಿ ಪ್ರಸಾರವಾಗುವ ಈ ಶೋ ಕನ್ನಡದಲ್ಲಿ ಪ್ರಸಾರವಾಗುತ್ತಿದೆಯೋ ಅಥವಾ ಆಂಗ್ಲ ಭಾಷೆಯಲ್ಲಿ ಪ್ರಸಾರವಾಗುತ್ತಿದೆಯೋ ಎನ್ನುವ ಅನುಮಾನ ಸಹಜವಾಗಿದೆ. ಒಟ್ಟಾರೆ 'ಬಿಗ್ ಬಾಸ್' ಕನ್ನಡಮಯವಾಗಲಿ!

—ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

## ಕಥೆಗೊಂದು ಸಂಚು

ಕಲರ್ಸ್ ಕನ್ನಡದ 'ಲಕ್ಷ್ಮೀ ಬಾರಮ್ಮ'ದಲ್ಲಿ ಬೆಟ್ಟದ ಮಹಾದೇವಯ್ಯ ತನಗೆ ಸಿಕ್ಕ ಕ್ಯಾಮೆರಾವನ್ನು ಲಕ್ಷ್ಮೀ ಕೈಗೆ ಕೊಡುತ್ತಾನೆ. ಲಕ್ಷ್ಮೀ ಅದನ್ನು ನೋಡಿದಾಗ ಅವಳ ಅತ್ತೆ ಮತ್ತು ಕೀರ್ತಿಯ ನಡುವೆ ನಡೆದ ಕೆಲ ಘಟನೆಗಳ ದಾಖಲೆಯನ್ನು ಗಮನಿಸುತ್ತಾಳೆ. ಅದನ್ನು ನೋಡಿ ಅವಳಿಗೆ ಆಶ್ಚರ್ಯವಾಗುತ್ತದೆ. ಕೀರ್ತಿಯ ಸಾವಿಗೆ ಕಾರಣ ಯಾರು ಎಂಬುದು ಗೊತ್ತಾಗುತ್ತದೆ.

ಆಕೆ ಅದನ್ನು ತನ್ನ ಗಂಡನಿಗೆ ಇಲ್ಲವೇ ಪೊಲೀಸರಿಗೆ ಒಪ್ಪಿಸಬೇಕಾಗಿತ್ತು. ಆದರೆ ಎಲ್ಲರ ಮುಂದೆ ವಿಡಿಯೊ ಪ್ರದರ್ಶಿಸಲು ಮುಂದಾಗಿ ತಪ್ಪು ಮಾಡಿದಳು. ವಿಡಿಯೊ ಬದಲಾಗಿದ್ದು ಹೇಗೆ ಎಂದು ತಿಳಿಯದೆ ಗಾಬರಿ ಆಗುತ್ತಾಳೆ. ಕಥೆಯನ್ನು ಮುಂದುವರಿಸಲು ಇಂತಹ ಸಂಚು ಮಾಡಬೇಕೇ?

—ಸಿ.ಆರ್. ಶ್ರೀನಿವಾಸ, ಬೆಂಗಳೂರು

## ಪೌರಕಾರ್ಮಿಕರಿಗೆ ನಮನ

ಚಂದನದಲ್ಲಿ ಗಾಂಧಿ ಜಯಂತಿ ವಿಶೇಷ ಕಾರ್ಯಕ್ರಮವನ್ನು ನಾ. ಸೋಮೇಶ್ವರ ಅವರು ನಡೆಸಿಕೊಟ್ಟರು. 'ಸತ್ಯಮೇವ ಜಯತೆ; ಸ್ವಚ್ಛ ಮೇವ ಜಯತೆ' ಎಂಬ ಧ್ಯೇಯವಾಕ್ಯದಡಿ ಮನುಕುಲದೆಲ್ಲರಿಗೂ ಅನ್ವಯಿಸುವ ಸಂದೇಶವನ್ನು ಅದು ನೀಡಿತು. ಬಂದೂಕು ಹಿಡಿದು ಗಡಿಕಾಯುವ ಯೋಧರಂತೆ, ಪೊರಕೆ ಹಿಡಿದು ನಾಡೊಳಗನ್ನು ಚಂದಗೊಳಿಸುವ ಪೌರ ಕಾರ್ಮಿಕರಿಗೆ ಕೋಟಿ ಕೋಟಿ ವಂದನೆಗಳು.

—ಸು. ಮಣಿ

ವಾರದ ಪತ್ರ




## ಸ್ವರ್ಗವನ್ನು ನರಕ ಮಾಡುವ ಕಲೆ

ಕಲರ್ಸ್ ಕನ್ನಡದ 'ಬಿಗ್ ಬಾಸ್' 11ನೇ ಆವೃತ್ತಿ ವಿಲಕ್ಷಣವಾಗಿಯೇ ಆರಂಭ ಆದಂತೆ ಕಾಣಿಸುತ್ತಿದೆ. ಸ್ಪರ್ಧಿಗಳಲ್ಲಿ ನರಕ–ಸ್ವರ್ಗ ಎಂದು ಎರಡು ವರ್ಗ ಮಾಡಿ ತಾರತಮ್ಯ ಮಾಡುತ್ತಿದ್ದಾರೆ. ಇನ್ನೊಂದೆಡೆ ಜಗದೀಶ್ ಎಂಬ ಸ್ಪರ್ಧಿ ಆಟಕ್ಕಿಂತ ಕೂಗಾಟವನ್ನೇ ಹೆಚ್ಚು ಮಾಡಿ ಉಳಿದವರಲ್ಲಿ ಭೀತಿಯನ್ನು ಹುಟ್ಟಿಸುವಂತೆ ನಡೆದುಕೊಳ್ಳುತ್ತಿದ್ದಾರೆ. ಅರ್ಹತೆಯನ್ನು ಮೀರಿ ಸುಳ್ಳು ಹೇಳುವ ವ್ಯಕ್ತಿಗಳನ್ನು ಈ ಶೋ ವಿಜೃಂಭಿಸುತ್ತಿದೆ.

ನರಕ ನಿವಾಸಿಗಳಲ್ಲಿ ಚೈತ್ರಾ, ಸುರೇಶ್ ಅವರಿಗೆ ಮಾತೇ ಬಂಡವಾಳ. ಮಾತನ್ನೇ ಪ್ರತಿಭೆ ಎಂದು ಮಾಪನ ಮಾಡಿರುವುದೇ ವಿಚಿತ್ರ. ಚೈತ್ರಾ ಮತ್ತು ಜಗದೀಶ್ ಜೈಲಿಗೆ ಹೋಗಿ ಬಂದವರು ಎನ್ನುವ ಸಾಮ್ಯತೆಯನ್ನು ಹೆಚ್ಚುಗಾರಿಕೆಯಂತೆ ಬಿಂಬಿಸುತ್ತಿದ್ದಾರೆ. ಅವರ ಚರಿತ್ರೆ ಗೊತ್ತಿರುವ ಸಂಗತಿ. ಮೌಲ್ಯವನ್ನು ಪ್ರಚುರಪಡಿಸಬೇಕಾದ ರಿಯಾಲಿಟಿ ಶೋ ಅದನ್ನು ಭಂಜನ ಮಾಡುತ್ತಿದೆ ಎಂದು ನೋಡಿದವರಿಗೆ ಅನ್ನಿಸದೇ ಇರದು.

ಸ್ವರ್ಗವನ್ನು ನರಕದಂತೆ ನಲುಗಿಸಿದ ಜಗದೀಶ್ ನರಕಕ್ಕೆ ತೆರಳಿದ್ದಾರೆ. ಅಲ್ಲಿ ಇನ್ನೇನು ಅವಾಂತರ ಮಾಡುತ್ತಾರೋ. ದೊಂಬಿ ಎಬ್ಬಿಸಲು ಹವಣಿಸುವ, ಯಾವ ನೀತಿ ನಿಯಮಗಳನ್ನು ಪಾಲಿಸದ ಅವರು ಯಾವ ಕ್ಷಣದಲ್ಲಾದರೂ ತನ್ನ ಸಹಸ್ಪರ್ಧಿಯ ಮೇಲೆ ಹಲ್ಲೆ ಮಾಡಬಲ್ಲರು ಎಂದೆನಿಸುತ್ತದೆ. ವಾರಾಂತ್ಯದಲ್ಲಿ ಕಿಚ್ಚನ ಪಂಚಾಯಿತಿಯಲ್ಲಿ ಅವರಿಗೆ ತಕ್ಕ ಶಾಸ್ತಿ ಏನೋ ಆಯಿತು. ಆಗ ಅಮಾಯಕನಂತೆ ಕಾಣಿಸಿಕೊಂಡರೂ ಮನದಲ್ಲೇ ಮಸಲತ್ತು ಮಾಡುತ್ತಿರುವ ಕ್ರೌರ್ಯ ಅವರ ಮನದಲ್ಲಿ ಇದೆ. ಈ ಬಗ್ಗೆ 'ಬಿಗ್ ಬಾಸ್' ಎಚ್ಚರಿಕೆ ತೆಗೆದುಕೊಳ್ಳಬೇಕು.

—ಗೌತಮ್ ಡಿ., ಬೆಂಗಳೂರು

## ಪ್ರೇಕ್ಷಕರ ದೌರ್ಭಾಗ್ಯ

ಝೀ ಕನ್ನಡದ 'ಸೀತಾ ರಾಮ'ದಲ್ಲಿ ರಾಮನ ಸ್ನೇಹಿತ ಶಾಮ್ ಸಿಹಿ ಜೊತೆ ಆತ್ಮೀಯತೆಯಿಂದ ಖುಷಿ ಹಂಚಿಕೊಂಡಾಗಲೆಲ್ಲ, ಪತ್ನಿ ಶಾಮಿಲಿ ಮುಖ ಕಿವುಚಿಕೊಳ್ಳುತ್ತಿರುತ್ತಾಳೆ. ಇದು ಯಾವತ್ತೂ ಶಾಮ್ ಗಮನಕ್ಕೆ ಬರುವುದಿಲ್ಲವೇ? ಪ್ರತಿ ಬಾರಿಯೂ ಇಂತಹ ಸನ್ನಿವೇಶ ಬಂದಾಗ ಅವನ ಪತ್ನಿ ಸಂತೋಷ ಕಾಣುವುದಿಲ್ಲ. ಇಂತಹ ಅಸಹಜ ಸನ್ನಿವೇಶವನ್ನು ನೋಡುವ ದೌರ್ಭಾಗ್ಯ ಪ್ರೇಕ್ಷಕರಿಗೆ ಏಕೆ ಬೇಕು?

—ಸಿ.ಕೆ. ಗಣಪ್ಪನವರ, ಮುಂಡರಗಿ

## ತಪ್ಪು ಸಂದೇಶ ತಪ್ಪಲಿ

ಝೀ ಕನ್ನಡದ 'ಪುಟ್ಟಕ್ಕನ ಮಕ್ಕಳು' ಚೆನ್ನಾಗಿ ಮೂಡಿಬರುತ್ತಿದೆ. ಇತ್ತೀಚೆಗೆ ಕಥೆ ಹಂದರ ಹಾದಿ ತಪ್ಪಿದಂತೆ ಕಾಣಿಸುತ್ತಿದೆ. ಉದಾಹರಣೆಗೆ ಹೇಳುವುದಾದರೆ ಸ್ನೇಹ ಐಎಎಸ್ ಪಾಸ್ ಮಾಡಿ ಜಿಲ್ಲಾಧಿಕಾರಿಯಾಗುತ್ತಾರೆ. ಪರೀಕ್ಷೆ ಪಾಸಾದ ಕೂಡಲೇ ಜಿಲ್ಲಾಧಿಕಾರಿ ಹುದ್ದೆಯನ್ನು ಸಾಮಾನ್ಯವಾಗಿ ಕೊಡುವುದಿಲ್ಲ. ಅದರದ್ದೇ ನೀತಿ ನಿಯಮಗಳ ಅನುಸಾರ ತರಬೇತಿ ಇರುತ್ತದೆ. ಆದರೆ ಕಾನೂನಾತ್ಮಕ ಸತ್ಯವನ್ನು ಮೀರಿ ಕಥೆಯನ್ನು ನಿರೂಪಿಸುವುದು ಸಮಾಜಕ್ಕೆ ತಪ್ಪು ಸಂದೇಶ ಕೊಟ್ಟಂತೆ.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ

## ಸ್ವಂತಿಕೆ ಕಳೆಗುಂದದಿರಲಿ

ಝೀ ಕನ್ನಡದ 'ಡಾನ್ಸ್, ಕರ್ನಾಟಕ ಡಾನ್ಸ್' ರಿಯಾಲಿಟಿ ಶೋನಲ್ಲಿ ರುದ್ರ ಮಾಸ್ಟರ್ ಕೊರಿಯೊಗ್ರಫಿಯಲ್ಲಿ ಶಶಾಂಕ್ ಮತ್ತು ಕಾವ್ಯ ಯಕ್ಷಗಾನ ನಾಟ್ಯವನ್ನು ಪ್ರದರ್ಶಿಸಿದರು. ಅದಕ್ಕೆ ತೀರ್ಪುಗಾರರಿಂದ ಶ್ಲಾಘನೆಯೂ ದೊರೆಯಿತು. ಚಿತ್ರಗೀತೆಗೆ ಯಕ್ಷಗಾನದ ನೃತ್ಯವನ್ನು ಸಂಯೋಜಿಸಿ ನೀಡಿದ ಪ್ರಯತ್ನ ಮನರಂಜನೆಯನ್ನೇನೋ ನೀಡಿತು. ಆದರೆ ಯಕ್ಷಗಾನಕ್ಕೊಂದು ಪಾರಂಪರಿಕ ಕಲೆಯ ಸ್ಪರ್ಶವಿದೆ. ಭಾಗವತರು ಹಾಡುವ ಕಂಚಿನ ಕಂಠದ ಹಾಡಿಗೆ ಹೆಜ್ಜೆ ಹಾಕಿ ತಕ್ಕಂತೆ ಕುಣಿಯಬೇಕು. ಹಾಡಿನ ಭಾವಕ್ಕೆ ಸಂಭಾಷಣೆ ನಡೆಯುತ್ತದೆ. ಈ ಎರಡರ ಬೆಸುಗೆಯಿಂದ ಯಕ್ಷಗಾನ ಪರಿಪೂರ್ಣವೆನಿಸುತ್ತದೆ. ಹಾಗಾಗಿ ಕಲೆ ಸ್ವಂತಿಕೆಯನ್ನು ಕಳೆದುಕೊಳ್ಳದಂತೆ ಕಾಳಜಿ ವಹಿಸಬೇಕು!

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ

## ಸೂಪರ್ ಸ್ಟಾರ್ ಅಗತ್ಯ

ಸ್ಟಾರ್ ಸುವರ್ಣದ 'ಸೂಪರ್ ಸ್ಟಾರ್' ಮಹಿಳೆಯರಿಗಾಗಿ ಕಲ್ಪಿಸಿದ ವಿಶೇಷ ವೇದಿಕೆ. ಇದು ನಾಲ್ಕು ವರ್ಷದಿಂದ ನಡೆಯುತ್ತಿದ್ದು ಸಾವಿರಾರು ಮಹಿಳೆಯರ ಬದುಕಿನ ಕಥೆಯನ್ನು ನಿರೂಪಿಸಿ ಪುರಸ್ಕರಿಸಿದೆ.

ನಿರೂಪಕಿ ಶಾಲಿನಿ ಉತ್ತಮವಾಗಿ ಕಾರ್ಯಕ್ರಮ ನಡೆಸಿಕೊಡುತ್ತಿದ್ದಾರೆ. ಅವರ ತಿಳಿಹಾಸ್ಯ ಪ್ರೀತಿಯ ಸವಿ ಮಾತು ವೀಕ್ಷಕರನ್ನು ಆಕರ್ಷಿಸುತ್ತಿದೆ. ಒಂದು ಸಂಜೆ ಕಾರ್ಯಕ್ರಮದ ಕೊನೆಗೆ ಶಾಲಿನಿ ಕಣ್ಣೀರಿಟ್ಟದ್ದು ವೇದನೆಯನ್ನು ಉಂಟುಮಾಡಿತು. ಮಾತ್ರವಲ್ಲದೆ ಸೂಪರ್ ಕಾರ್ಯಕ್ರಮಕ್ಕೆ ಮಂಗಳ ಹಾಡಿದ್ದೂ ಇನ್ನೂ ಬೇಸರವನ್ನು ಹುಟ್ಟಿಸಿದೆ.

—ಬಸಪ್ಪ, ಮುಳ್ಳೂರು